ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಉತ್ತರ ಕನ್ನಡ ಜಿಲ್ಲೆಯ ಶಿರ್ಸಿ ವಿಭಾಗದಲ್ಲಿ ಕ್ಯಾಪಿಟಲ್ ಸಿವಿಲ್ ಇಂಜಿನಿಯರಿಂಗ್ ಕೆಲಸಗಳು ಆಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಸಿವಿಲ್ ಇಂಜಿನಿಯರಿಂಗ್ ಕೆಲಸವನ್ನು ಕೂಡಲೆ ಕೈಗೆತ್ತಿಕೊಳ್ಳಬೇಕೆಂದು ಶಿರ್ಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ಸಾರಿಗೆ ಸಂಸ್ಥೆಗೆ ಮನವಿ ಮಾಡಿಕೊಂಡಿರುವರೆ?

ಇ) ಹಾಗಿದ್ದಲ್ಲಿ, ಈ ಕೆಲಸಗಳನ್ನು ಕೂಡಲೆ ಪ್ರಾರಂಭಿಸಲು ಸರ್ಕಾರ ಸೂಕ್ತ ಕ್ರಮ, ಕೈಗೊಳ್ಳುವುದೆ?

ಶ್ರೀ. ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಹೌದು.

ಇ) ಹೌದು. ಕ.ರಾ.ರ.ಸಾ. ಸಂಸ್ಥೆ ಕ್ರಮ ಕೈಗೊಳ್ಳುವುದು.

**ಅನೇಕಲ್‌ನಲ್ಲಿ ಕುಷ್ಠರೋಗ ನಿಯಂತ್ರಣ ಕೇಂದ್ರ ಸ್ಥಾಪಿಸಲು ಹಣ ಮಂಜೂರಾಗಿರುವುದರ ಬಗ್ಗೆ.**

(489) - ಶ್ರೀ ಎಂ. ವಿ: ಕೇಶವಮೂರ್ತಿ, (ಅನೇಕಲ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಬೆಂಗಳೂರು ಜಿಲ್ಲೆಯ ಅನೇಕಲ್‌ನಲ್ಲಿ ಕುಷ್ಠರೋಗ ನಿಯಂತ್ರಣ ಕೇಂದ್ರ ಸ್ಥಾಪಿಸಲು ಹಣ ಮಂಜೂರಾಗಿರುವುದು ನಿಜವೇ?

2) ಹಾಗಿದ್ದಲ್ಲಿ ಸದರಿ ಕೇಂದ್ರವನ್ನು ಈವರೆವಿಗೂ ಪ್ರಾರಂಭಿಸದಿರಲು ಕಾರಣವೇನು?

3) ಕುಷ್ಠರೋಗ ನಿಯಂತ್ರಣ ಕೇಂದ್ರವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು):

ಅ) ಹೌದು.

ಆ) ಸೂಕ್ತ ಸರ್ಕಾರಿ ನಿವೇಶನ ದೊರಕದೆ ಇರುವುದರಿಂದ ಕಟ್ಟಡದ ಕೆಲಸ ಪ್ರಾರಂಭಿಸಿಲ್ಲ. ಆದಾಗ್ಯೂ ಅನೇಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ಒಂದು ಭಾಗದಲ್ಲಿ ಒಂದು ಮಾರ್ಪಾಡಿತ ಕುಷ್ಠರೋಗ ನಿಯಂತ್ರಣ ಕೇಂದ್ರವು 1986-87ನೇ ಸಾಲಿನಿಂದ ಕೆಲಸ ನಿರ್ವಹಿಸುತ್ತಿದೆ.

ಇ) ಹೊಸ ಕಟ್ಟಡಕ್ಕೆ ಸುಕ್ತ ನಿವೇಶನ ದೊರಕಿದನಂತರ ಕಟ್ಟಡದ ಕೆಲಸ ಪ್ರಾರಂಭಿಸಲಾಗುವುದು.

**ಹುಕ್ಕೇರಿ ತಾಲ್ಲೂಕಿನಲ್ಲಿ ಮತ್ತಿವಡೆ ಗ್ರಾಮದ ಹಾಗೂ ಮೋದಗೆ ಗ್ರಾಮದ ಹೈಸ್ಕೂಲ್‌ಗಳ ತೊಂದರೆ ಬಗ್ಗೆ.**

(323). - ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮತ್ತಿವಡೆ ಹಾಗೂ ಮೋದಗೆ ಗ್ರಾಮಗಳಲ್ಲಿ ಹೈಸ್ಕೂಲಗಳನ್ನು ಯಾವ ಸಂಸ್ಥೆಗಳಿಂದ ನಡೆಸಲಾಗುತ್ತಿದೆ ಹಾಗೂ ಎಷ್ಟು ವರ್ಷಗಳಿಂದ ನಡೆಸಲಾಗುತ್ತಿದೆ?

ಆ) ಸಿಬ್ಬಂಡಿ ವರ್ಗಕ್ಕೆ ಸರ್ಕಾರದಿಂದ ಸಂಬಳ ಕೊಡಲು ಇರುವ ತೊಂದರೆಯೇನು?

ಇ) ಕರ್ನಾಟಕ ಮಹಾರಾಷ್ಟ್ರದ ಗಡಿಯಲ್ಲಿರುವ ಈ ಶಾಲೆಗಳಿಗೆ ವಿಶೇಷ ಅನುದಾನ ಮಂಜೂರು ಮಾಡಲು ಇರುವ ತೊಂದರೆಯೇನು?